ಶ್ರೀ ಬಿ. ಸೋಮಶೇಖರ್(ಕಂದಾಯ ಸಚಿವರು) :

ಅ) ಸೋಮವಾರಪೇಟೆ ತಾಲ್ಲೂಕು ಹಾರಂಗಿ ಜಲಾಶಯ ಯೋಜನೆಯಡಿ ಜಮೀನು ಮುಳುಗಡೆಯಾದ ಮಾವಿನಹಳ್ಳಿ ಹಾಗೂ ಹುದುಗೂರು ಗ್ರಾಮದ ನಿವಾಸಿಗಳು ಯಡವನಾಡು ಹಾಗೂ ಹುದುಗೂರು ಗ್ರಾಮಗಳ ಅರಣ್ಯ ಜಮೀನಿನ ಒತ್ತುವರಿ ಮಾಡಿ ಇಂಟಿಮಡುತಿಟ್ಟು ಎಂಬಲ್ಲಿ ವಾಸಿಸುತ್ತಿದ್ದಾರೆ. ಸದರಿ ಜಮೀನು ಅರಣ್ಯ ಜಮೀನಾಗಿರುವುದರಿಂದ ಕಂದಾಯ ಇಲಾಖೆಯಿಂದ ಭೂ ಮಂಜೂರಾತಿ ಮಾಡಿ ಪಟ್ಟ ಕೊಡಲು ಬರುವುದಿಲ್ಲ ಈ ಬಗ್ಗೆ ಅರಣ್ಯ ಇಲಾಖೆಯು ಸದರಿ ಜಮೀನನ್ನು ಸರ್ಕಾರದಿಂದ 'ಡಿ' ನೋಟಿಫಿಕೇಷನ್ ಆದೇಶ ಪಡೆದು ಕಂದಾಯ ಇಲಾಖೆಗೆ ನೀಡಬೇಕಾಗಿರುತ್ತದೆ. ಮೇಲ್ಕಂಡ ಒತ್ತುವರಿದಾರರು ಇರುವ ಜಮೀನನ್ನು ಅವರಿಗೆ ಸಕ್ರಮಗೊಳಿಸ ಬೇಕಾದಲ್ಲು ಸದರಿ ಜಾಗಕ್ಕೆ ಬದಲಾಗಿ ಕಂದಾಯ ಇಲಾಖೆಯಿಂದ ಸೋಮವಾರಪೇಟೆ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಗೆ ಬಸಿರುಗುಟ್ಟೆ ಮತ್ತು ಅರಿಶಿನಗುಟ್ಟೆ ಎಂಬ ಗ್ರಾಮಗಳಲ್ಲಿ ಬದಲಿ ಜಾಗ ನೀಡುವ ಕುರಿತು ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಯಲ್ಲಿ ಬರುವ ಸರ್ವೆ ನಂ. 87, 88ರ ಸರ್ಕಾರಿ ಜಮೀನನ್ನು ಆಶ್ರಯ ಯೋಜನೆಯಡಿಯಲ್ಲಿ ನಿವೇಶನ

1743 - ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಯಲ್ಲಿ ಬರುವ ಸರ್ವೆ ನಂ.87, 88ರ ಸರ್ಕಾರಿ ಜಮೀನನ್ನು ಆಶ್ರಯ ಯೋಜನೆಯ ನಿವೇಶನಗಳಿಗೆ ಮಂಜೂರು ಮಾಡಲು ಸರ್ಕಾರ ಯೋಚಿಸಿದೆಯೇ?*

ಆ) *ಹಾಗಿದ್ದರೆ ಈ ಬಗ್ಗೆ ಕೈಗೊಂಡಿರುವ ಕ್ರಮವೇನು ಯಾವಾಗ ಈ ನಿವೇಶನಗಳನ್ನು ಹಂಚಲಾಗುವುದು?*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಹೌದು.

ಆ) ಉತ್ತರಹಳ್ಳಿ ಗ್ರಾಮದ ಸರ್ವೆ ನಂ. 87, 88ರಲ್ಲಿ 26.00 ಎಕರೆ ಸರ್ಕಾರಿ ಜಮೀನನ್ನು ಆಶ್ರಯ ಸಮಿತಿಗೆ ಒದಗಿಸುವ ವಿಷಯ ತೀವ್ರ ಪರಿಶೀಲನೆಯಲ್ಲಿದೆ. ಈ ಜಮೀನನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸಿದ ಕೂಡಲೇ ನಿವೇಶನಗಳನ್ನು ರಚಿಸಿ ಹಂಚಲು ಕ್ರಮ ಕೈಗೊಳ್ಳಲಾಗುವುದು.

ಶಿವಮೊಗ್ಗ ಜಿಲ್ಲೆಯಲ್ಲಿ ಆಶ್ರಯ ಯೋಜನೆ

1744 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶಿವಮೊಗ್ಗ ಜಿಲ್ಲೆಯಲ್ಲಿ ಆಶ್ರಯ ಯೋಜನೆಯ ಮೇರೆಗೆ ನಿವೇಶನ ಪಡೆಯಲು ಬಂದ ಅರ್ಜಿಗಳು ಎಷ್ಟು? (ತಾಲ್ಲೂಕುವಾರು ವಿವರ)*